Received on 20/7/2021
Wop. 4:33 PM

ಕರ್ನಾಟಕ ಸರ್ಕಾರ
**ಕಾಲೇಜು ಶಿಕ್ಷಣ ಇಲಾಖೆ**
**ಕನ್ನಡ ಕಾಯಕ ವರ್ಷ2020-2021**

ಸಂಖ್ಯೆ: ಕಾಶಿಇ/218/ನಿವೃತ್ತಿ2022/ಸಿಆರ್2/2021-22

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:15-07-2021

**ಸುತ್ತೋಲೆ**

ವಿಷಯ: 2022ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋನಿವೃತ್ತಿ ಹೊಂದಲಿರುವ ಸರ್ಕಾರಿ ಹಾಗೂ ಕಾನೂನು /ಚಿತ್ರಕಲಾ ಕಾಲೇಜುಗಳ ಬೋಧಕ ಮತ್ತು ಬೋಧಕೇತರ ನೌಕರರುಗಳ ವಿವರಗಳನ್ನು ಕಳುಹಿಸುವ ಬಗ್ಗೆ.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಎಲ್ಲಾ ಸರ್ಕಾರಿ ಕಾಲೇಜು ಹಾಗೂ ಕಾನೂನು/ ಚಿತ್ರಕಲಾ ಕಾಲೇಜುಗಳ ಪ್ರಾಂಶುಪಾಲರುಗಳು ಮತ್ತು ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ತಿಳಿಸುವುದೇನೆಂದರೆ ಕರ್ನಾಟಕ ನಾಗರೀಕ ಸೇವಾ ನಿಯಮ 96(2)ರ ಪ್ರಕಾರ ದಿನಾಂಕ:01-01-2022 ರಿಂದ 31-12-2022ನೇ ಕ್ಯಾಲೆಂಡರ್ ಅವಧಿಯಲ್ಲಿ ವಯೋನಿವೃತ್ತಿ ಹೊಂದಲಿರುವ ಬೋಧಕ ಮತ್ತು ಬೋಧಕೇತರ ವರ್ಗದ ನೌಕರರುಗಳ ವಿವರಗಳನ್ನು ಪ್ರತ್ಯೇಕವಾಗಿ ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ-ಋಣ ನಿರ್ವಹಣೆ ಇಲಾಖೆಗೆ ತುರ್ತಾಗಿ ಕಳುಹಿಸಬೇಕಾಗಿರುತ್ತದೆ. ಈ ಸುತ್ತೋಲೆಯೊಂದಿಗೆ ಲಗತ್ತಿಸಿ ಕಳುಹಿಸಿರುವ ಅನುಬಂಧದಲ್ಲಿ ಈ ಕೆಳಕಂಡ ಮಾಹಿತಿಯನ್ನು ದಿನಾಂಕ:31-08-2021ರೊಳಗೆ ಅಂಚೆ ಮೂಲಕ ತಲುಪಿಸತಕ್ಕದ್ದು.

1. ನಿವೃತ್ತಿ ಹೊಂದಲಿರುವ ನೌಕರರುಗಳ ಜನ್ಮ ದಿನಾಂಕ ಹಾಗೂ ಇತರೆ ಮಾಹಿತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ನಿಖರವಾದ/ ಸ್ಪಷ್ಟ ಮಾಹಿತಿ ಕಳುಹಿಸಲು ಸೂಚಿಸಲಾಗಿದೆ.

2. ನಿವೃತ್ತಿ ಹೊಂದುತ್ತಿರುವವರ ಜನ್ಮ ದಿನಾಂಕವನ್ನು ಸೇವಾಪುಸ್ತಕ ಅಥವಾ ಇತರೆ ದಾಖಲಾತಿಗಳೊಂದಿಗೆ ಜಂಟಿನಿರ್ದೇಶಕರು/ಪ್ರಾಂಶುಪಾಲರು ಖುದ್ದಾಗಿ ಪರಿಶೀಲಿಸಿ, ದೃಢೀಕರಿಸಿ ಮಾಹಿತಿಯನ್ನು ಕಳುಹಿಸಿಕೊಡುವುದು. (ಒಂದು ವೇಳೆ ತಪ್ಪಾಗಿ ಮಾಹಿತಿಗಳನ್ನು ನೀಡಿದಲ್ಲಿ ಸಂಬಂಧಿಸಿದ ಜಂಟಿ ನಿರ್ದೇಶಕರು, ಪ್ರಾಂಶುಪಾಲರು ಹಾಗೂ ಸಂಬಂಧಪಟ್ಟ ಅಧೀಕ್ಷಕರು, ವಿಷಯ ನಿರ್ವಾಹಕರುಗಳನ್ನು ಮುಂದಿನ ಆಗುಹೋಗುಗಳಿಗೆ ಪೂರ್ಣ ಜವಾಬ್ದಾರರನ್ನಾಗಿ ಮಾಡಲಾಗುವುದು)

3. ಕಾಲೇಜಿನಲ್ಲಿ/ಕಛೇರಿಯಲ್ಲಿ 2022ನೇ ಇಸವಿಯಲ್ಲಿ ಯಾರೂ ನಿವೃತ್ತಿ ಹೊಂದದೆ ಇರುವ ಪಕ್ಷದಲ್ಲಿ ನಿಗದಿತ ಅನುಬಂಭದಲ್ಲಿ "ಶೂನ್ಯ ವರದಿ" ಎಂದು ನಮೂದಿಸಿ ಕಳುಹಿಸಬೇಕೆಂದು ಸೂಚಿಸಲಾಗಿದೆ.

4. ನಿಯೋಜನೆ ಮೇಲೆ ತೆರಳಿರುವವರ ವಿವರಗಳನ್ನು ಮೂಲ ಕಛೇರಿ/ಕಾಲೇಜಿನವರು ಮಾತ್ರ ಸಲ್ಲಿಸುವುದು ಹಾಗೂ ಯಾವ ಕಾಲೇಜಿಗೆ ನಿಯೋಜನೆ ಮೇಲೆ ತೆರಳಿರುತ್ತಾರೆ ಎಂದು ಷರಾ ವಿಭಾಗದಲ್ಲಿ ನಮೂದಿಸಬೇಕು.

5. ಪ್ರಾಂಶುಪಾಲರುಗಳ ಹಾಗೂ ಉಪನ್ಯಾಸಕರುಗಳ ಬೋಧನಾ ವಿಷಯವನ್ನು ಕಡ್ಡಾಯವಾಗಿ ನಮೂದಿಸಬೇಕು.

6. ನಿವೃತ್ತರಾಗುವ ಸಿಬ್ಬಂದಿಗಳ ನಿವೃತ್ತಿ ದಿನಾಂಕದ ಜೇಷ್ಠತೆಯನ್ನು ಅನುಸರಿಸಿ ನಿವೃತ್ತಿ ದಿನಾಂಕ ನಮೂದಿಸಿರಬೇಕು (Monthwise) ಹಾಗೂ ನಮೂನೆಯಲ್ಲಿ ಬೋಧಕರ ವಿವರಪಟ್ಟಿ ಹಾಗೂ ಬೋಧಕೇತರರ ವಿವರ ಪಟ್ಟಿಯನ್ನು ಅನುಬಂಧದಲ್ಲಿ (Separate List of Teaching & Non Teaching) ) ಪ್ರತ್ಯೇಕವಾಗಿ ತಯಾರಿಸಿ ಕಳುಹಿಸಬೇಕೆಂದು ಸೂಚಿಸಲಾಗಿದೆ.. ಮುಂದುವರೆದು ದಿನಾಂಕಗಳನ್ನು 01-01-2022 ಮಾದರಿಯಲ್ಲೇ(ಉದಾ ಚಿಹ್ನೆ: . , / ಉಪಯೋಗಿಸಬಾರದು) ನಮೂದಿಸಬೇಕು.

7. ಪಿಂಚಣಿ ವಿಭಾಗದ ಇ-ಮೇಲ್ ವಿಳಾಸ dce.pension@gmail.comಗೆ ಸಾಫ್ಟ್ ಪ್ರತಿಯನ್ನು**MS excel** ತಂತ್ರಾಂಶದಲ್ಲಿ ಮೇಲ್ ಮಾಡಬೇಕು ಹಾಗೂ ಮುದ್ರಿತ ಪ್ರತಿಯನ್ನು ಅಂಚೆ ಮೂಲಕ ಕಳುಹಿಸಲು ಸೂಚಿಸಲಾಗಿದೆ.

ಅಡಕ: ನಮೂನೆ

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:

1. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಮತ್ತು ಕಾನೂನು/ಚಿತ್ರಕಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – (ಅಗತ್ಯ ಕ್ರಮಕ್ಕಾಗಿ).
2. ಪ್ರಾದೇಶಿಕ ಜಂಟಿ ನಿರ್ದೇಶಕರುಗಳು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಮಂಗಳೂರು, ಕಲಬುರಗಿ, ಶಿವಮೊಗ್ಗ ಹಾಗೂ ಧಾರವಾಡ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
3. ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು - ಸದರಿ ಸುತ್ತೋಲೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಲಾಗಿದೆ.
4. ಹೆಚ್ಚುವರಿ ಪ್ರತಿ
5. ಕಛೇರಿ ಪ್ರತಿ

**ಅನುಬಂಧ-2**

ಕಾಲೇಜು ಶಿಕ್ಷಣ ಇಲಾಖೆ

ಸರ್ಕಾರಿ ಪದವಿ ಕಾಲೇಜುಗಳಲ್ಲಿ 2022ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋನಿವೃತ್ತಿ ಹೊಂದಲಿರುವ
ಬೋಧಕೇತರ ಸಿಬ್ಬಂದಿಯವರ ವಿವರಗಳು (ಪ್ರತ್ಯೇಕವಾಗಿ)

| KGID No. (as per HRMS) | Name | Designation | Date of Birth | Date of Appointment | Date of Retirement in 2022 | Remarks |
|---|---|---|---|---|---|---|
| ಕೆಜಿಐಡಿ ಸಂಖ್ಯೆ | ಹೆಸರು | ಪದನಾಮ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | 2022ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋನಿವೃತ್ತಿ ಹೊಂದಲಿರುವ ದಿನಾಂಕ | ಷರಾ |
| 1 | 2 | 3 | 4 | 5 | 6 | 7 |
| | | | | | | |

ದೃಢೀಕರಣ: ಮೇಲ್ಕಂಡ ಸಿಬ್ಬಂದಿಯವರ ಜನ್ಮ ದಿನಾಂಕವನ್ನು ಅವರ ಮೂಲ ಸೇವಾ ಪುಸ್ತಕದ ಅಥವಾ ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿ ನಮೂದಾಗಿರುವ ಜನ್ಮ ದಿನಾಂಕದೊಂದಿಗೆ ತಾಳೆ ಮಾಡಿ ಸರಿಯಾಗಿದೆ ಎಂದು ದೃಢೀಕರಿಸಿರುತ್ತೇನೆ

ಜಂಟಿ ನಿರ್ದೇಶಕರು/ಪ್ರಾಂಶುಪಾಲರು

**ಅನುಬಂಧ-1**

ಕಾಲೇಜು ಶಿಕ್ಷಣ ಇಲಾಖೆ

ಸರ್ಕಾರಿ ಪದವಿ ಕಾಲೇಜುಗಳಲ್ಲಿ 2022ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋನಿವೃತ್ತಿ ಹೊಂದಲಿರುವ ಬೋಧಕೇತರ ಸಿಬ್ಬಂದಿಯವರ ವಿವರಗಳು (ಪ್ರತ್ಯೇಕವಾಗಿ)

| KGID No. as per HRMS) | Name | Designation | Date of Birth | Date of Appointment | Date of Retirement in 2022 | Remarks |
|---|---|---|---|---|---|---|
| ಕೆಜಿಐಡಿ ಸಂಖ್ಯೆ | ಹೆಸರು | ಪದನಾಮ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | 2022ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋನಿವೃತ್ತಿ ಹೊಂದಲಿರುವ ದಿನಾಂಕ | ಷರಾ |
| 1 | 2 | 3 | 4 | 5 | 6 | 7 |
| | | | | | | |

ದೃಢೀಕರಣ: ಮೇಲ್ಕಂಡ ಸಿಬ್ಬಂದಿಯವರ ಜನ್ಮ ದಿನಾಂಕವನ್ನು ಅವರ ಮೂಲ ಸೇವಾ ಪುಸ್ತಕದ ಅಥವಾ ಎಸ್.ಎಸ್.ಎಲ್.ಸಿ.ಅಂಕಪಟ್ಟಿಯಲ್ಲಿ ನಮೂದಾಗಿರುವ ಜನ್ಮ ದಿನಾಂಕದೊಂದಿಗೆ ತಾಳೆ ಮಾಡಿ ಸರಿಯಾಗಿದೆ ಎಂದು ದೃಢೀಕರಿಸಿರುತ್ತೇನೆ

ಜಂಟಿ ನಿರ್ದೇಶಕರು/ಪ್ರಾಂಶುಪಾಲರು